## ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ...

ಕರ್ನಾಟಕ ಸರ್ಕಾರ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,

# ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕೆರೆಬಿಳಚಿ.

**ಚನ್ನಗಿರಿ ತಾಲ್ಲೂಕು. ದಾವಣಗೆರೆ ಜಿಲ್ಲೆ. – 577218**

| | |
|---|---|
| ಮಂಜೂರಾದ ವರ್ಷ | 2006 |
| ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ | ಸಕಇ 30 ಆಆನಿ 2005 (13-09-2005) |
| ಶೈಕ್ಷಣಿಕ ಪ್ರಾರಂಭವಾದ ವರ್ಷ | 2006-07 |
| ಕಟ್ಟಡದ ಸ್ವರೂಪ | ಸ್ವಂತ ಕಟ್ಟಡ |
| ಅಕ್ಷಾಂಶ – ರೇಖಾಂಶ | $14.14^0$ - $75.88^0$ |
| ನಿವೇಶನದ ವಿಸ್ತೀರ್ಣತೆ | 11 ಎಕರೆ. |
| ಪ್ರವೇಶ ಮಂಜೂರಾತಿ ಸಂಖ್ಯೆ | 300 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 270 |
| ಮಾಧ್ಯಮ | ಆಂಗ್ಲ ಮಾಧ್ಯಮ |



ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಗ್ರಾಮದ ಹತ್ತಿರದಲ್ಲಿರುವ ಏಷ್ಯಾದ ಎರಡನೆ ಅತಿ ವಿಸ್ತಾರವಾದ ಸರೋವರವಾದಂತಹ ಶಾಂತಿಸಾಗರದ ಹತ್ತಿರದ ವಿಶಾಲವಾದ ಜಾಗದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ 2006 ರಲ್ಲಿ ಪ್ರಾರಂಭವಾಗಿದೆ. ಈ ವಸತಿ ಶಾಲೆಯು ಸ್ವಂತ ಕಟ್ಟಡವನ್ನು ಹೊಂದಿದ್ದು, 34,100 ಚ. ಅಡಿ ವಿಸ್ತೀರ್ಣದಲ್ಲಿ ಕಟ್ಟಡವನ್ನು ಹೊಂದಿದ್ದು, 6 ರಿಂದ 10 ನೇ ತರಗತಿವರೆಗೆ ಆಂಗ್ಲ ಮಾಧ್ಯಮದಲ್ಲಿ ತರಗತಿಗಳು ನಡೆಯುತ್ತಿವೆ. ಪ್ರಸ್ತುತ ವಸತಿ ಶಾಲೆಯಲ್ಲಿ 270 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಸತಿ ಶಾಲೆಯಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಸುಂದರವಾದ ವಸತಿ ಗೃಹಗಳನ್ನು ಹೊಂದಿದೆ.

ವಸತಿ ಶಾಲೆಯು 24x7 ವಿದ್ಯುತ್ ಹಾಗೂ ನೀರಿನ ಸೌಲಭ್ಯವನ್ನು ಹೊಂದಿದೆ. ಉತ್ತಮ ಗ್ರಂಥಾಲಯ, ವಿಜ್ಞಾನ ಪ್ರಯೋಗಾಲಯ, ಸ್ಮಾರ್ಟ ಕ್ಲಾಸ್, ಕಂಪ್ಯೂಟರ್ ಲ್ಯಾಬ್, ಆಟದ ಮೈದಾನ, ಹೊರಾಂಗಣ & ಒಳಾಂಗಣ ಜಿಮ್, ಶಾಲಾ ಕೈ ತೋಟ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ವಿಶಾಲವಾದ ಸಭಾಂಗಣವನ್ನು ಹೊಂದಿದೆ. ವಸತಿ ಶಾಲೆಯು ನುರಿತ ಶಿಕ್ಷಕರನ್ನು ಹೊಂದಿದ್ದು, ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುವಂತೆ ಮಾಡುವ ಮೂಲಕ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದೆ.

ನಮ್ಮ ವಸತಿ ಶಾಲೆಯ ವಿಹಂಗಮ ನೋಟ...

